ಶ್ರೀ ಮತಿ ದ್ಯಾವಮ್ಮ.—ನನ್ನ (ಜ) ಪ್ರಶ್ನೆಗೆ ಉತ್ತರವಾಗಿ ನಾಲ್ಕು ಲಕ್ಷ 85 ಸಾವಿರದ 800 ರೂಪಾಯಿಗಳನ್ನು ಗಂಡಸಿಕ್ಷೇತ್ರದ ಐದು ಹೋಬಳಿಗಳ ರಸ್ತೆಗಳ ನಿರ್ಮಾಣಕ್ಕಾಗಿ ಒದಗಿಸಿದೆ ಎಂದು ಹೇಳಿ ಅದರ ಪೈಕಿ ಕೇವಲ ಎರಡು ಲಕ್ಷ 66ಸಾವಿರದ 451 ರೂಪಾಯಿಗಳು ಮಾತ್ರ ಖರ್ಚುಮಾಡಿದ್ದೀವೆಂದು ನನ್ನ (ಸಿ) ಪ್ರಶ್ನೆಗೆ ಉತ್ತರ ಹೇಳಿದ್ದೀರಿ. ಅಂದ ಮೇರೆ ಸಂಬಂದ ಪಟ್ಟ ಇರಾಖೆಯಲ್ಲಿ ಇನ್ನೆಷ್ಟರಮಟ್ಟಿಗೆ ಕೆಲಸ ನಡೆಯುತ್ತಿದೆ?

†ಶ್ರೀ ಎಚ್. ಕೆ. ವೀರಣ್ಣಗೌಡ.—ಇಲಾಖೆಯಲ್ಲಿ ಕೆಲಸವೇನೋ ಚೆನ್ನಾಗಿಯೇ ನಡೆಯುತ್ತಿದೆ. ಏಕೆಂದರೆ ಇವರು ಪ್ರಶ್ನೆಕೇಳಿ ನಾಲ್ಕು ತಿಂಗಳು ಗಳಾದುವು. ಇಲಾಖೆಯಿಂದ ಉತ್ತರ ಕೊಟ್ಟಿರುವುದು ಎರಡು ತಿಂಗಳುಗಳ ಹಿಂದೆ. ಈಚೆಗೆ ಕೆಲಸ ಬೇಕಾವಷ್ಟು ನಡೆದಿದೆ. ಹಣವೂ ಖರ್ಚಾಗಿದೆ. ಇನ್ನೂ ಕೆಲಸ ನಡೆಯುವುದಕ್ಕೆ ಸಾಕಷ್ಟು ಹಣವೂ ಇದೆ. ಆದ್ದರಿಂದ ನಮ್ಮ ನಮ್ಮನೆ ಕೆಲಸ ಚೆನ್ನಾಗಿ ಇರಾಖೆಯಲ್ಲಿ ನಡೆಯುತ್ತಿಲ್ಲವೆಂದು ಹೇಳುವುದಕ್ಕೆ ಏನೇನು ಕಾರಣಗಳು ಇಲ್ಲ.

ಶ್ರೀ ಮತಿ ದ್ಯಾವಮ್ಮ.—ಈಗ ಕೈಗೊಂಡಿರುವ ರಸ್ತೆಗಳ ಕೆಲಸ ಪೂರ್ತಿಯಾಗಿ ನಡೆಯದೇ ಇರುವುದರಿಂದ ಆ ರಸ್ತೆಗಳಲ್ಲಿ ಸಂಚಾರಕ್ಕೆ ಅಡ್ಡಿಯಾಗಿರುವುದು ಸರ್ಕಾರಕ್ಕೆ ಗೊತ್ತಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾಲ್ಕು ತಿಂಗಳುಗಳ ಹಿಂದೆ ಆ ರೀತಿ ಆಗಿರಬಹುದು. ಪರಿಸ್ಥಿತಿ ಇವತ್ತು ಸುಧಾರಿಸಿದೆ.

ಶ್ರೀಮತಿ ದ್ಯಾವಮ್ಮ.— ಇನ್ನೆಷ್ಟು ದಿವಸಗಳಲ್ಲಿ ಈಗ ಕೈಗೊಂಡಿರುವ ರಸ್ತೆ ನಿರ್ಮಾಣ ಕೆಲಸ ಪೂರೈಸಬಹುದು?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಷ್ಟು ಬೇಗ ಪೂರೈಸಬೇಕೆಂಬುದೇ ಸರ್ಕಾರದ ಇಚ್ಛೆ.

ಶ್ರೀ ಎಚ್. ಜಿ. ನರಸಿಂಹೇಗೌಡ.— ಸರ್ಕಾರದವರು ಕೈಗೊಂಡಿರತಕ್ಕ ರಸ್ತೆಗಳ ಪೈಕಿ ಅನೇಕ ಲಿಂಕ್ ರಸ್ತೆಗಳು ಸರಿಯಾಗಿ ರಿಪೇರಿಯಾಗದಿರುವುದೇ ಇವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಶ್ರೀಮತಿ ದ್ಯಾವಮ್ಮನವರಿಗೆ ನಿಮ್ಮಂತಹ ಪ್ರಶ್ನೆಯ ಬಗ್ಗೆ ಆಗಲೇ ಉತ್ತರ ಹೇಳಿದೆ. ಅದಷ್ಟು ಜಾಗ್ರತೆಯಾಗಿ ಆ ಕೆಲಸಗಳು ನಡೆಯುತ್ತಿವೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈಗಾಗಲೇ ಕೈಗೊಂಡಿರುವ ರಸ್ತೆಗಳ ಕೆಲಸ ಅದಷ್ಟು ಬೇಗ ಪೂರ್ತಿಗೊಳಿಸುವುದಕ್ಕೆ ಸರಿಯಾದ ಗಾ್ಯಂಟನ್ನು ಕೊಡುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಗಾ್ಯಂಟನ್ನು ಆಗಲೇ ಕೊಟ್ಟಿದೆ. ಅದನ್ನು ಬಿಟವಾಡೆ ಮಾಡಲಾಗುತ್ತಿದೆ. ಎಲ್ಲ ಕಡೆಯೂ ಹಂಚಲಾಗಿದೆ. ಒಟ್ಟು ರಸ್ತೆಗಳ ನಿರ್ಮಾಣಕ್ಕಾಗಿ ಎರಡು ರೂಪಾಯಿಗಳನ್ನು ಒದಗಿಸಿದೆ. ಕೆಲವು ಕಡೆಗಳಲ್ಲಿ ಈಗಾಗಲೇ ಹಣಸೀರಿ ಕೆಲಸಗಳು ಸಮರ್ಪಕವಾಗಿ ನಡೆದಿವೆ; ನಡೆಯುತ್ತಲೂ ಇವೆ. ಹಾಸನ ಜಿಲ್ಲೆಯಲ್ಲಿ ಏನಾದರೂ ಮಿಸ್ಸಿಂಗ್ ಆಗಿ ಲಿಂಕ್ ರೋಡ್ಸ್ ರಿಪೇರಿ ಆಗದೆ ಅರ್ಧಂಬರ್ಧವಾಗಿದ್ದರೆ ಅವನ್ನೆಲ್ಲಾ ಅದಷ್ಟು ಜಾಗ್ರತೆ ಪೂರ್ಣಗೊಳಿಸುವುದಕ್ಕೆ ವ್ಯವಸ್ಥೆ ಮಾಡಿದೆ.

RESTORATION AND REPAIRS OF SMALL TANKS IN THE FIVE HOBLIES OF GANDASI CONSTITUENCY.

*Q.—927. Smt. DYAVAMMA (Gandasi).—

Will the Government be pleased to state:—

(a) whether petitions have not been received since 1957 requesting them to take up the restoration and repairs of small tanks in

the five Hoblies of Gandasi, Janagal, Dudda, Bagur, Dandiganahalli of Gandasi constituency;

(b) if so, the names of such tanks that need repairs and restoring in these hoblies;

(c) the number out of these tanks that have been taken up for execution and the number that have been completed as also the expenditure incurred thereon;

(d) the number of works that are pending completion and when these will be completed;

(e) the amount of estimates of these tanks and the names Hobliwise;

(f) the number of works that are yet to be taken up for execution, their names and the amounts?

A.—Sri H. K. VEERANNA GOWDH (Minister for Public Works and Electricity).—

(a) Yes. Petitions have been received.

(b) *Vide* statement placed on the Table of the House.

(c) Works taken up for execution ... 146
Works completed 77

Regarding expenditure incurred on each of the above works please see Column 6 of the statement placed on the Table of the House.

(d) 69. The probable period of completion of these works is noted in Column 7 of the Statements placed on the Table of the House.

(e) *Vide* Column 5 of the Statement placed on the Table of the House.

(f) 69. *Vide* Statement placed on the Table of the House. The estimated cost of these works is noted in Column 5 of the statement placed on the Table of the House.

ಶ್ರೀಮತಿ ದ್ಯಾವಮ್ಮ.—ಈ ಐದು ಹೋಬಳಿಗಳ ಚಿಕ್ಕ ಕೆರೆಗಳ ದುರಸ್ತಿ ಕಾಮಗಾರಿಗಳ ಬಗ್ಗೆ ಅವಶ್ಯಕವಾಗಿ ಆಗಬೇಕಾಗಿರುವ ಕೆಲಸವಾಗಿದೆ ಹಾಗೆಯೇ ಆ ಕೆಲಸ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

† ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲಸವೇನೂ ನಿಂತಿಲ್ಲ ಇನ್ನೂ ಮಾಡಬೇಕಾದ ಕೆಲಸ ಬಹಳವಿದೆ. ಕಾರಣವೇನೆಂದರೆ ಇದುವರೆಗೂ ನೂರಾರು ವರ್ಷಗಳಿಂದ ಪಾಳುಬಿದ್ದಿದ್ದ ಈ ಕೆರೆಗಳನ್ನು ರಿಪೇರಿ ಮಾಡದೇ ಇದ್ದುದರಿಂದರೆ ಈಗ ಒಂದು ನಿರ್ದಿಷ್ಟವಾದ ಕಾಲದಲ್ಲಯೇ ಅವನ್ನು ರಿಪೇರಿ ಮಾಡಲಕ್ಕಾಗಲಿಲ್ಲ. ಈಗ ದುದ್ದ ಹೋಬಳಿಯಲ್ಲಿ 30 ಕೆರೆಗಳ ಕೆಲಸ ಮುಗಿದಿದೆ. 20 ಕೆರೆಗಳ ಕೆಲಸ ನಡೆಯುತ್ತಿವೆ. ಇನ್ನೂ 13 ಕೆರೆಗಳ ಕೆಲಸವನ್ನು ತೆಗೆದುಕೊಳ್ಳಬೇಕಾಗಿದೆ. ಅಂದಮೇಲೆ ಒಂದೇ ಒಂದು ಹೋಬಳಿಯಲ್ಲಿ ಇಷ್ಟು ಕೆರೆಗಳ ರಿಪೇರಿ ಕೆಲಸವನ್ನು ತೆಗೆದುಕೊಂಡಿರುವಾಗ ಇತರ ಕಡೆಗಳಲ್ಲಿ ಯಾವ ಕೆರೆಯ ಕೆಲಸವನ್ನು ಸರ್ಕಾರ ತೆಗೆದುಕೊಂಡಿಲ್ಲವೆಂದೂ, ಸರ್ಕಾರದವರು ಆ ಕೆಲಸದಲ್ಲಿ ಉದಾಸೀನ ಮಾಡುತ್ತಿದ್ದಾರೆಂದೂ ಮಾನ್ಯ ಸದಸ್ಯರು ಯಾರೂ ಅರ್ಥ ಮಾಡಿಕೊಳ್ಳಬೇಕಾದ ಪ್ರಸಂಗವಿಲ್ಲ. ಎಷ್ಟು ಮಾಡಿದರೂ ಆಗಬೇಕಾದ ಕೆಲಸ ಬೇಕಾದಷ್ಟು ಇದೆ

(ಶ್ರೀ ಎಚ್. ಕೆ. ವೀರಣ್ಣಗೌಡ)

ಎಂಬುದು ಸರ್ಕಾರಕ್ಕೆ ತಿಳಿದಿದೆ. ಬೇಕಾದಷ್ಟು ಈಗಾಗಲೇ ಸಿಬ್ಬಂದಿ, ಸಾರಿಗೆಗಳನ್ನು ಇಟ್ಟು ಕೊಂಡಿರುವುದರಿಂದ ಎಲ್ಲಾಕಡೆಗಳಲ್ಲೂ ಈ ಕೆರೆಗಳ ದುರಸ್ತಿ ಕಾಮಗಾರಿ ತ್ವರಿತವಾಗಿ ನಡೆಯುತ್ತಿದೆ. ಅದರಲ್ಲೂ ಮುಖ್ಯವಾಗಿ ನೀರಾವರಿ ಕೆಲಸಗಳಿಗೆ ಸರ್ಕಾರದವರು ಪೂರ್ಣ ಗಮನವನ್ನು ಕೊಡುತ್ತಿದ್ದಾರೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಎಸ್ಟಿಮೇಟು ತಯಾರಾಗಿ ಮಂಜೂರು ಆಗಿದ್ದರೂ ಕೂಡ ದುಡ್ಡು ಇಲ್ಲ ಅದ ಕಾರಣ ಕೆಲಸ ನಿಲ್ಲಿಸಿ ಎಂದು ತಿಳಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ರಸ್ತೆಯವಿಚಾರ ಈಗತಾನೆ ಹೇಳಿದ ಉತ್ತರವು ಇದಕ್ಕೂ ಅನ್ವಯಿಸುತ್ತದೆ. ಕೆಲಸ ಸ್ವಲ್ಪ ನಿಧಾನವಾಗಿರಬಹುದು. ಆದರೆ ಇತ್ತೀಚೆಗೆ ಹಣ ಒದಗಿಸಿದೆ ಸರ್ಕ್ಯೂಲರ್ ಹೊರಡಿಸಿದೆ. ಹಣ ಬಟವಾಡೆ ಆಗುತ್ತಾ ಇದೆ. ಕೆಲಸ ನಿಲ್ಲಿಸಿಲ್ಲ. ಕೆಲಸ ನಡೆಯುತ್ತಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕೆಲಸ ನಿಲ್ಲಿಸಬೇಕೆಂದು ಸರ್ಕ್ಯೂಲರ್ ಹೊರಡಿಸಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ. ಅದು ನಾಲ್ಕುತಿಂಗಳು ಹಿಂದಿನಮಾತು. ಕೇಂದ್ರ ಸರಕಾರದಿಂದ ಹಣ ಬರಬೇಕಾಗಿತ್ತು, ಈಗ ಹಣ ಬಂದಿದೆ. ಕೆಲಸ ನಡೆದಿದೆ. ನಿರೀಕ್ಷಣೆಯಲ್ಲಿದ್ದ ಕೆಲಸಗಳ ಬಗ್ಗೆ ಹಾಗೆ ತಿಳಿಸಿತ್ತು. ಮಂಜೂರಾದ ಕೆಲಸಗಳನ್ನು ನಿಲ್ಲಿಸಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಎಷ್ಟಿಮೇಟು ಸಾಂಕ್ಷನ್ ಆದನಂತರ ಟೆಂಡರ್ ಕರೆದರೂ ಕೂಡ ರಿಸ್ಟ್ರಾವ್ನ್ಸ್ ಬರಲಿಲ್ಲವೆಂದು ಕೆಲಸ ಸ್ಟಾರ್ಟ್ ಮಾಡಬಾರದು ಎಂದು ಸರಕಾರ ತಿಳಿಸಲಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ತಪ್ಪುಅಭಿಪ್ರಾಯವೆಂದು ವಿನಯದಿಂದ ಹೇಳುತ್ತೇನೆ. ಕೆಲಸ ನಿಲ್ಲಿಸಲು ಮತ್ತೆ ಬೇರೆ ಕಾರಣವಿರಬಹುದು. ಏನಾದರೂ ತಕರಾರು ಬಂದು ಕೇಸು ಕೋರ್ಟಿಗೆ ಹೋಗಿರಬಹುದು. ಸರಕಾರದ ಆರ್ಡರ್ ಸರಿಯಾಗಿಯೇ ಇದೆ. ತಪ್ಪು ಅಭಿಪ್ರಾಯ ಮಾಡಿಕೊಳ್ಳಬಾರದು.

INCLUSION OF CHATURTHI JAINS IN THE LIST OF BACKWARD CLASSES.

*Q.—945. Sri B. G. KHOT (Sadalga).—

Will the Government be pleased to state:—

the reasons for not including Chaturthi Jains in the list of Backward Classes ?

A.—Sri N. RACHIAH (Minister for Agriculture and Social Welfare)—

Chaturthi Jains are not included in the list of Backward Classes as they are a sub-sect among Jains who are forward.

Sri B. G. KHOT.—What action is Government taking to do justice to this sub-sect ?